

## ಮತ್ತೊಬ್ಬ ಪೀಕೆ?

ಅಮೀರ್ ಖಾನ್ ನಿರೀಕ್ಷೆ ಸುಳ್ಳಾಗಿಸಿಲ್ಲ. ಭರಪೂರ ಮನರಂಜನೆಯ ಜತೆಗೆ 'ಪೀಕೆ' ಧರ್ಮಗಳ ಕುರಿತ ಜಿಜ್ಞಾಸೆ, ಚರ್ಚೆಯನ್ನೂ ಹುಟ್ಟುಹಾಕಿದೆ. ವಿವಾದಗಳೂ ಸುತ್ತಿಕೊಂಡಿವೆ. ಬಿಡುಗಡೆಯಾದ ಮೂರು ದಿನಗಳಲ್ಲಿಯೇ ಚಿತ್ರ ಸುಮಾರು ₹95 ಕೋಟಿ ಗಳಿಕೆ ಕಂಡಿದೆ ಎನ್ನಲಾಗುತ್ತಿದೆ. ಈ ವರ್ಷ ತೆರೆಕಂಡ 'ಹ್ಯಾಪಿ ನ್ಯೂ ಇಯರ್' ಗಳಿಕೆಯ ವೇಗಕ್ಕೆ ಪೀಕೆ ತಲುಪಿಲ್ಲದಿದ್ದರೂ ಒಟ್ಟಾರೆ ಗಳಿಕೆಯಲ್ಲಿ ದಾಖಲೆ ನಿರ್ಮಿಸುವ ಸೂಚನೆ ನೀಡಿದೆ. 'ಪೀಕೆ'ಯಲ್ಲಿದ್ದಂತೆಯೇ ಧರ್ಮಗಳ ವಿಡಂಬನೆಯನ್ನು 'ಓ ಮೈ ಗಾಡ್' ಚಿತ್ರದಲ್ಲಿಯೂ ಮಾಡಲಾಗಿತ್ತು. ಆದರೆ ಆ ಚಿತ್ರಕ್ಕೆ ಇಲ್ಲದ ವಿರೋಧ ಇಲ್ಲಿ ಯಾಕೆ ಎಂಬ ಪ್ರಶ್ನೆ ನಿರ್ದೇಶಕ ರಾಜ್‌ಕುಮಾರ್ ಹಿರಾನಿ ಅವರದು. ಚಿತ್ರವನ್ನು ನಿಷೇಧಿಸಬೇಕು ಎಂಬ ಆಗ್ರಹದ ಬಗ್ಗೆ ಅವರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಈ ಚಿತ್ರದಲ್ಲಿ ಭೋಜ್‌ಪುರಿ ಭಾಷೆಯ ಶೈಲಿಯನ್ನು ಅನುಸರಿಸಲು ಅಮೀರ್ ಪ್ರೇರಣೆ ಪಡೆದಿದ್ದು ದಿಲೀಪ್ ಕುಮಾರ್ ಅವರ 'ಗಂಗಾ ಜಮುನಾ' ಚಿತ್ರದಿಂದ. ಇಂತಹ ಹಲವು ಸ್ಫೂರ್ತಿಯ ಛಾಯೆಗಳನ್ನು ಚಿತ್ರದಲ್ಲಿ ಕಾಣಬಹುದು. ಅಂದಹಾಗೆ, 'ಪೀಕೆ'ಯ ಮುಂದುವರಿದ ಆವೃತ್ತಿಗೂ ಹಿರಾನಿ ತಯಾರಿ ನಡೆಸಿದ್ದಾರೆ. ಚಿತ್ರದ ಅಂತ್ಯದಲ್ಲಿಯೇ ಎರಡನೇ ಭಾಗದ ಸುಳಿವು ನೀಡಿದ್ದ ಹಿರಾನಿ ಅದನ್ನು ಒಪ್ಪಿಕೊಂಡಿದ್ದಾರೆ ಕೂಡ. ರಣಬೀರ್ ಕಪೂರ್ ಈ ಆವೃತ್ತಿಯಲ್ಲಿ ಅನ್ಯಗ್ರಹ ಜೀವಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಅಮೀರ್ ಖಾನ್ ಸಹ ಇರಲಿದ್ದಾರಂತೆ. ರಣಬೀರ್‌ಗೆ ಅನ್ಯಗ್ರಹ ಜೀವಿಯ ಪಾತ್ರ ಸೂಕ್ತವಾಗಿ ಹೊಂದಿಕೆಯಾಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಭೂಮಿಗೆ ಕಾಲಿಡುವ ಮತ್ತೊಂದು ಅನ್ಯಲೋಕ ಜೀವಿಯೂ ಧರ್ಮದ ಸೂಕ್ಷ್ಮತೆಗಳ ತೊಳಲಾಟಕ್ಕೆ ಸಿಲುಕುತ್ತದೆಯೇ ಎಂಬ ಕುತೂಹಲವನ್ನೂ 'ಪೀಕೆ'ಯ ಅಂತ್ಯ ಮೂಡಿಸಿದೆ. ಅಮೀರ್ ಮತ್ತು ರಣಬೀರ್‌ರ ಜುಗಲ್ಬಂದಿ ಮತ್ತಷ್ಟು ಮನರಂಜನೆ ನೀಡುವ ಭರವಸೆಯನ್ನಂತೂ ಹುಟ್ಟುಹಾಕಿದೆ. 'ಪೀಕೆ'ಯ ಮುಂದುವರಿದ ಆವೃತ್ತಿಯ ಕಥನದ ಚಿಕ್ಕದೊಂದು ವಸ್ತು ಮನದಲ್ಲಿದೆ. ಆದರೆ ಅದನ್ನು ಇನಷ್ಟು ಬೆಳೆಸಬೇಕು ಎನ್ನುತ್ತಾರೆ ಹಿರಾನಿ. ಆದರೆ ಸದ್ಯಕಂತೂ ಮತ್ತೊಂದು 'ಪೀಕೆ' ಸೃಷ್ಟಿಯಾಗುವುದಿಲ್ಲ. ಏಕೆಂದರೆ ಹಿರಾನಿ ಈಗ ಸಂಜಯ್ ದತ್ ಅವರ ಬದುಕನ್ನಾಧರಿಸಿದ ಚಿತ್ರ ಹಾಗೂ ಮುನ್ನಾಭಾಯಿ ಸರಣಿಯ ಮೂರನೇ ಆವೃತ್ತಿಯ ಕೆಲಸದಲ್ಲಿ ಬಿಜಿ.

## ಮತ್ತೆ ಬಂದಳು ರಾಖಿ

ರಾಖಿ ಸಾವಂತ್ ಎಂಬ ನಟಿಯ ಹೆಸರನ್ನು ಮರೆತಿದ್ದೀರಾ? ನಟಿ ಎನ್ನುವುದಕ್ಕಿಂತ ಐಟಂ ಸಾಂಗ್ ತಜ್ಞೆ ಎಂದು ಆಕೆಯನ್ನು ಕರೆಯಬಹುದು. ಲೋಕಸಭೆ ಚುನಾವಣೆಯ ಬಳಿಕ ಜನ ಆಕೆಯನ್ನು ಮರೆತಿರಲೇಬೇಕು. ಏಕೆಂದರೆ ಸದಾ ಒಂದಿಲ್ಲೊಂದು ರೀತಿಯಲ್ಲಿ ಸುದ್ದಿಯಲ್ಲಿರುತ್ತಿದ್ದ ವಿವಾದಗಳ ರಾಣಿ ರಾಖಿ. ರಾಷ್ಟ್ರೀಯ ಆಮ್ ಪಕ್ಷ ಹುಟ್ಟುಹಾಕಿ, ಅದರ ಏಕೈಕ ಅಭ್ಯರ್ಥಿಯೂ ಆಗಿ ಆಕೆ ಗಳಿಸಿದ್ದು 1995 ಮತಗಳನ್ನು ಮಾತ್ರ. ಅವರ ಪಕ್ಷದ ಚಿಹ್ನೆಯಾದ ಮೆಣಸಿನಕಾಯಿ ಅವರಿಗೇ ಖಾರ ಎಂದರೆ ಹೇಗಿರುತ್ತದೆ ಎಂಬುದನ್ನು ತೋರಿಸಿಕೊಟ್ಟಿತ್ತು. ಅಲ್ಲಿಂದೀಚೆಗೆ ರಾಖಿ ನಾಪತ್ತೆಯಾಗಿದ್ದರು. ಅದರಲ್ಲಿಯೂ ಬೆಳ್ಳಿತೆರೆಯಿಂದ ದೂರ ಹೋಗಿ ವರ್ಷಗಳೇ ಕಳೆದಿವೆ. ಕಿರುತೆರೆಯಲ್ಲಿ 'ಸ್ವಯಂವರ' ನಡೆಸಿ ಇನ್ನಷ್ಟು ವಿವಾದಗಳನ್ನು ಎಳೆದುಕೊಂಡ ರಾಖಿ, ಕಿರುತೆರೆಯಲ್ಲಿಯೇ ಮೊಕ್ಕಾಂ ಹೂಡಿದ್ದರು. ಅವರಿಗೆ ಚಿತ್ರರಂಗದಲ್ಲಿ ಅವಕಾಶಗಳು ಸಿಗದಿರುವುದಕ್ಕೆ ಅವರ ವರ್ತನೆಯೇ ಕಾರಣ ಎಂಬ ದೂರುಗಳು ಕೇಳಿಬಂದಿದ್ದವು. 'ನನಗೆ ಎರಡು ವರ್ಷಗಳಿಂದ ಅವಕಾಶಗಳೇ ಸಿಗುತ್ತಿಲ್ಲ. ಈ ಉದ್ಯಮದಲ್ಲಿ ಅಸ್ತಿತ್ವ ಕಾಪಾಡಿಕೊಳ್ಳುವುದು ಸುಲಭವಲ್ಲ. ನಾನು ಮೂಲತಃ ಸಿನಿಮಾ ಕುಟುಂಬದಿಂದ ಬಂದವಳಲ್ಲದ ಕಾರಣ ಯಾರ ಬೆಂಬಲವೂ ಇಲ್ಲ. ನನ್ನ ಪರಿಶ್ರಮದಿಂದಲೇ ನಾನು ಈ ಮಟ್ಟಕ್ಕೆ ಬೆಳೆದಿದ್ದೇನೆ. ನಾನು ನನ್ನ ಮೇಲೆ ಯಾವ ಮಿತಿಗಳನ್ನೂ ಹಾಕಿಕೊಳ್ಳಲು ಬಯಸುವುದಿಲ್ಲ. ನಾನು ಮುಕ್ತವಾಗಿ ತೆರೆದುಕೊಳ್ಳಲು ಸಿದ್ಧ' ಎಂದು ರಾಖಿ ಸಂದರ್ಶನವೊಂದರಲ್ಲಿ ಇತ್ತೀಚೆಗೆ ಹೇಳಿಕೊಂಡಿದ್ದಾರೆ. ಹೀಗೆ ಹಿರಿತೆರೆಯಿಂದ ಕಣ್ಮರೆಯಾಗಿದ್ದ ರಾಖಿ 'ಮುಂಬೈ ಕ್ಯಾನ್ ಡ್ಯಾನ್ಸ್ ಸಾಲಾ' ಚಿತ್ರದ ಮೂಲಕ ಪುನರಾಗಮಿಸುತ್ತಿದ್ದಾಳೆ. ಈ ಚಿತ್ರದಲ್ಲಿ ರಾಖಿಯದು ನೇತ್ಯಾತ್ಮಕ ಛಾಯೆಯಿರುವ ಪಾತ್ರ. ಕಥೆ ಅದ್ಭುತವಾಗಿದೆ. ಗಟ್ಟಿ ಹಾಗೂ ಅರ್ಥಪೂರ್ಣ ಪಾತ್ರ ತಮ್ಮದು ಎಂದು ಹೇಳಿಕೊಂಡಿದ್ದಾರೆ. ಆದರೆ ಇಲ್ಲಿಯೂ ರಾಖಿ ಕಿರಿಕ್ಕು ನಿಂತಿಲ್ಲ. ನಿರ್ದೇಶಕ ಸಚೀಂದ್ರ ಶರ್ಮಾ ರಾಖಿಗೆ ಇನ್ನಷ್ಟು ಎಕ್ಸ್‌ಪೋಸ್ ಮಾಡಲು ಹೇಳಿದ್ದರೆಂಬ ಕಾರಣಕ್ಕೆ ರಾಖಿಯ ಗೆಳೆಯ ಅವರಿಗೆ ಸೆಟ್‌ನಲ್ಲೇ ಕಪಾಳ ಮೋಕ್ಷ ಮಾಡಿದ್ದಾನೆ ಎಂಬ ಸುದ್ದಿ ಬಂದಿದೆ. ಮೂಲಗಳ ಪ್ರಕಾರ ಈ ಸುದ್ದಿ ಪ್ರಚಾರದ ಗಿಮಿಕ್. ರಾಖಿ ಇದ್ದಲ್ಲಿ ಇಂಥದ್ದೊಂದು ವಿವಾದ ಇರಲೇಬೇಕಲ್ಲವೇ?

■ ಅಮಿ

